103

ಕೇರಳ ಜ್ಯೋತಿಷ

ಪ್ರಮುಖ ಯೋಗಗಳು

★

ಲೇಖಕರು:

ವೈದ್ಯಗುರು ಎಂ. ಆರ್. ಭಟ್,

ಮಂಗಳೂರು.

1956.

ಒಂದಾಣೆ ಮಾಲೆ

'ಒಂದಾಣೆ ಮಾಲೆ'ಯ ಪ್ರಕಟಣೆಗಳು:

೧*ಕೆಪ್ಪಟೆರಾಯ; ೨ ನಾರೀಶ್ವರರು(ದ್ವಿ. ಮುದ್ರಣ); ೩ ಕಳ್ಳನಿಗೆ ಸಂಭಾವನೆ (ದ್ವಿ. ಮುದ್ರಣ) ೪ *ಸದ್ರಿಸುಬ್ಬ; ೫ ಅದ್ಭುತ ತ್ಯಾಗ (ದ್ವಿ. ಮುದ್ರಣ); ೬ *ಚುನಾವಣೆ ಅರ್ಥಾತ್ ಬನಾವಣೆ; ೭*ಬೀಡಿ ಸೇದಬೇಡಿ ಮತ್ತು ಆ ಮಗು; ೮*ಇಂಗ್ಲಿಷ್–ಕನ್ನಡ ಅರ್ಥಕೋಶ; ೯ ಲಂಚಕ್ಕೆ ಸಂಚಕಾರ (ದ್ವಿ.ಮುದ್ರಣ); ೧೦ *ಟಶ್ಯೂ ಔಷಧಿಗಳ ಕೈಪಿಡಿ; ೧೧ *ಶ್ರೀ ಕ್ಷೇತ್ರ ಧರ್ಮಸ್ಥಳ (ತೃ. ಮುದ್ರಣ); ೧೨*ಜೀವದ ಮೌಲ್ಯ ಮತ್ತು ಇತರ ಕಥೆಗಳು; ೧೩ ಸತ್ತವನ ಸೇಡು ಮತ್ತು ಇತರ ಕಥೆಗಳು; ೧೪ *ವೆಂಕಟನ ಸಂಕಟ; ೧೫ ಬಾಬಿಗೆ ಬಾಸಿಂಗ (ದ್ವಿ.ಮುದ್ರಣ); ೧೬ ವೇಣೂರಿನ ಗತವೈಭವ(ದ್ವಿ.ಮುದ್ರಣ); ೧೭ ಒಗಟುಗಳು (ದ್ವಿ. ಮುದ್ರಣ); ೧೮ ಜಗಳಗಂಟಿ ಮತ್ತು ಇತರ ಕಥೆಗಳು; ೧೯ ರಥೋತ್ಸವ; ೨೦ ಕಲಿನಾಯಿ ಮತ್ತು ಮುಪ್ಪು; ೨೧ ಭಾರತದ ಮಹಾನಗರ–I(ದ್ವಿ.ಮುದ್ರಣ); ೨೨ ತಿರುಕ್ಕುರಲ್ (ದ್ವಿ.ಮುದ್ರಣ); ೨೩ ಸೂರ್ಯನ ಸಂಸಾರ; ೨೪ ಭಾರತದ ಮಹಾನಗರ–II (ದ್ವಿ.ಮುದ್ರಣ); ೨೫ ಧೈರ್ಯ ಮತ್ತು ಇತರ ಸತ್ಯಕಥೆಗಳು; ೨೬ ಪರೋಪಕಾರ(ದ್ವಿ. ಮುದ್ರಣ); ೨೭*ಹಾಸವಿಲಾಸ; ೨೮ ಸತ್ಯವಂತ ಬಾಬಿ [ದ್ವಿ.ಮುದ್ರಣ]; ೨೯ ಜಾಣ್ಮೆಯ ಒಗಟುಗಳು ೩೦ ಜಾತಕ ಕಥೆಗಳು; ೩೧ ಕಾರ್ಕಳದ ಚರಿತ್ರೆ; ೩೨ ಮಂಜರ್; ೩೩ ದರ್ಶನದ ಕಥೆಗಳು; ೩೪ ಅಳುವಿನ ಹೊಳೆ ಮತ್ತು ಕೇಶವಭೂಪ; ೩೫ ಶರಾಬಿನ ಪೀಪಾಯಿಗಳು; ೩೬ ಉಪದೇಶ ಶತಕ; ೩೭ ನಿಮಗೆ ಗೊತ್ತಿದೆಯೇ?; ೩೮ ಚತುರ ಚಮತ್ಕಾರ; ೩೯ ಸತೀ ಸಾವಿತ್ರಿ (ದ್ವಿ.ಮುದ್ರಣ); ೪೦ ಆಭರಣಗಳ ಪೆಟ್ಟಿಗೆ ಮತ್ತು ಇತರ ಕಥೆಗಳು; ೪೧ ಭಾರತದ ಮಂತ್ರಿಮಂಡಲಗಳು(ದ್ವಿ.ಮುದ್ರಣ); ೪೨ ಕಾಲುಬಳೆಯ ಕಥೆ; ೪೩ ಭಾರತದ ನಾಲ್ಕು ಕಲಶಗಳು; ೪೪ ವ್ಯಸನದಿಂದ ಲಾಭ ಮತ್ತು ಇತರ ಕಥೆಗಳು; ೪೫ ಸುಭಾಷಿತ; ೪೬ ೧೮೫೭ರ ಸಿಪಾಯಿದಂಗೆ; ೪೭ ಅಕಾಂಡ ತಾಂಡವ; ೪೮ ಸಾಹಸದ ಕಥೆಗಳು; ೪೯ ಸಂಜ್ಞಾಜ್ಞಾನಕೋಶ; ೫೦ ಪಂಡಿತನ ಪಿಟೀಲು; ೫೧ ಭೋಗಯಾತ್ರೆ; ೫೨ ಸಂಗ್ರಾಮಸಿಂಹ; ೫೩ ಧರ್ಮಶಿಕ್ಷಾ; ೫೪ ಮಹಾತ್ಮ; ೫೫ ಮೀರಾಬಾಯಿ; ೫೬ ವೀರರಮಣಿ ಕರ್ಮದೇವಿ; ೫೭ ಅರಳಿದ ನಗು; ೫೮ ಸಚಿತ್ರ ಜಪಾನ್; ೫೯ ಚುಟ್ಟಬಿಟ್ಟಧಿಟ್ಟ; ೬೦ ನಿರಪರಾಧಿ; ೬೧ ಭಕ್ತವಾಣಿ; ೬೨ ಜಾನಪದ ಸಾಹಿತ್ಯ; ೬೩ ಡಾಕ್ಟರ್ ಆರೋಗ್ಯಮ್; ೬೪ ಲೌಕಿಕ ನ್ಯಾಯಗಳು; ೬೫ ಶಿಶುಪಾಲ ಮಾನಭಂಗ; ೬೬ ಜರಾಸಂಧ ವಧೆ; ೬೭ ಜವಾಹರಲಾಲ (ದ್ವಿ. ಮುದ್ರಣ); ೬೮ ಕರುಣೆ ಮತ್ತು ಇತರ ಕಥೆಗಳು; ೬೯ ಶ್ರೀಕ್ಷೇತ್ರ ಉಡುಪಿ; ೭೦ ವಿನೋದ ವಿಹಾರ; ೭೧ ಭಾರತದ ಗತವೈಭವ; ೭೨ ಸತ್ಯ ಹರಿಶ್ಚಂದ್ರ; ೭೩ ಸೂಕ್ತಿಗಳು; ೭೪ ಉ.ಕ.ದ ಯಕ್ಷಗಾನ ಕಲಾವಿದರು; ೭೫ ದೇವರ ಸಾಮ್ರಾಜ್ಯದಲ್ಲಿ....; ೭೬ ಕ್ರಾಂತಿಕಂಠೀರವ ಭಗತ್‌ಸಿಂಘ್; ೭೭ ಜಾತಕಪಠನ ಮತ್ತು ಇತರ ಕಥೆಗಳು; ೭೮ ಅಮೃತವಾಣಿ; ೭೯ ಮಾಯಾಮೃಗ; ೮೦ ಡಾಕ್ಟರ್ ಗಾಂಧೀಜಿ; ೮೧ ಆದಿಶ್ರೀ ಶಂಕರಾಚಾರ್ಯರ ಜೀವನ ಚರಿತ್ರೆ; ೮೨ ಆದಿಶ್ರೀ ಶಂಕರಾಚಾರ್ಯ ವಿರಚಿತ ಸ್ತೋತ್ರಗಳು (ಅರ್ಥ ಸಹಿತ); ೮೩ ಬೆಡಗಿನ ನಾಡು ಕೊಡಗು; ೮೪ ಆಮೆಯ ಚಿಪ್ಪು ಮತ್ತು ಇತರ ಸತ್ಯಕಥೆಗಳು; ೮೫ ಮಂಗಳೂರಿಂದ ಮಧುರೆಗೆ; ೮೬ ಸತೀ ವೃಂದಾ; ೮೭ ಗೌತಮನ ಗೃಹತ್ಯಾಗ; ೮೮ ಗೃಹವೈದ್ಯ; ೮೯ ನಮ್ಮ ನಾಟಕಗಳು; ೯೦ ಜಾನಪದ ಕಥೆಗಳು; ೯೧ ಕೆಲವು ಉಪಯುಕ್ತ ಸಲಹೆಗಳು. ೯೨ ಅಭಿಜ್ಞಾನ ಶಾಕುಂತಲದಲ್ಲಿ ಲೋಕನೀತಿ. ೯೩ ಹೋಮಿಯೋಪಥಿ-ಚಿಕಿತ್ಸಾಸಾರ. ೯೪ ಯಕ್ಷಗಾನ ನಾಟಕದ ಪರಂಪರೆ; ೯೫ ಪುನರುಜ್ಜೀವನ (ಏಕಾಂಕ ನಾಟಕ); ೯೬ ಪ್ರಥಮ ಚಿಕಿತ್ಸೆಯ ಕೈಪಿಡಿ; ೯೭ ಹಸ್ತರೇಖಾ ವಿಜ್ಞಾನ; ೯೮ ಸ್ವಾತಂತ್ರ್ಯ; ೯೯ ಭಾರತೀಯ ಸ್ವಾತಂತ್ರ್ಯ ಸಂಗ್ರಾಮ; ೧೦೦ ಭಕ್ತ ಕುಚೇಲ; ೧೦೧ ಉತ್ತರನ ಪೌರುಷ; ೧೦೨ ಕುಮಾರ; ೧೦೩ ಕೇರಳ ಜ್ಯೋತಿಷ.

*ಈ ಗುರುತು ಹಾಕಿದ ಪುಸ್ತಕಗಳ ಪ್ರತಿಗಳು ಮುಗಿದಿವೆ.

ಒಂದಾಣೆ ಮಾಲೆ, ಪ್ರಭಾತ ಆಫೀಸು, ರಥಬೀದಿ, ಮಂಗಳೂರು

ಕೇರಳ ಜ್ಯೋತಿಷ

ಪ್ರಮುಖ ಯೋಗಗಳು

---

೧. ಮೇಷ ಲಗ್ನ

೧. ಸೂರ್ಯ ಶುಕ್ರರಿಬ್ಬರು ವೃಷಭ, ತುಲಾ ಅಥವಾ ಸಿಂಹದಲ್ಲಿದ್ದರೆ ಧನಸಂಪಾದನೆ ಯಥೇಷ್ಟ ಮಾಡಿ ಶ್ರೀಮಂತನಾಗುವನು. ಆದರೆ, ಸೂರ್ಯ ಬುಧರು ಏಕತ್ರಿತರಾಗಿ ಈ ರಾಶಿಗಳಲ್ಲಿದ್ದರೆ ಬಹುಕಾಲ ದರಿದ್ರನಾಗುವನು.

೨ ಬುಧನು ವೃಷಭದಲ್ಲಿದ್ದರೆ ಪತ್ನಿಯು ಕುಲಟೆ.

೩. ವೃಶ್ಚಿಕದಲ್ಲಿ ಶನಿಯಿದ್ದರೆ ೧೯ ವರ್ಷ ಕಷ್ಟಕಾಲ; (ಹತ್ತು ವರ್ಷ ಅಪ್ರಯೋಜಕ; ಅನಂತರ ನಿಃಸ್ವಾರ್ಥತೆಯಿಂದ ಕೀರ್ತಿ ಸಂಪಾದನೆ ಮಾಡುವನು); ಶನಿದಶೆಯು ಉತ್ತಮ ಫಲದಾಯಕ.

೪ ಶುಕ್ರನು ತುಲೆಯಲ್ಲಿದ್ದರೆ ಎರಡು ವಿವಾಹಿತ ಸ್ತ್ರೀಯರು.

೫. ಮಿಥುನದಲ್ಲಿ ಮಕರಾಂಶದಲ್ಲಿ ಕುಜನಿದ್ದರೆ ವ್ಯಭಿಚಾರಿ.

೬. ವೃಶ್ಚಿಕದಲ್ಲಿ (ಅಷ್ಟಮ ಭಾವದಲ್ಲಿ) ಕುಜನಿದ್ದು ೧೬ ವರ್ಷಗಳೊಳಗೆ ಕುಜದಶೆ ಬಂದರೆ ಆ ದಶೆಯಲ್ಲಿ ಮರಣವು ಸಂಭವನೀಯ.

೭. ನಿಶ್ಚಯವಾದ ವಿವಾಹವು ತಪ್ಪಿಹೋಗಿ ಇನ್ನೊಂದು ಹುಡುಗಿಯೊಡನೆ ವಿವಾಹವಾಗುವುದು; ಇದಕ್ಕೆ ಕುಜನು ತುಲೆಯಲ್ಲಿ ಶುಕ್ರನೊಡನೆ ಇರಬೇಕು.

೮. ಚಂದ್ರನು ಶುಕ್ರ ಅಥವಾ ಗುರುವಿನಿಂದ ಬಾಧಿತನಾದರೆ ಉನ್ಮಾದಗ್ರಸ್ತನಾಗುವನು.

೯. ಶನಿಯು ಮಿಥುನದಲ್ಲಿದ್ದರೆ, ವ್ಯಭಿಚಾರಿ.

೧೦. ಶನಿಚಂದ್ರರು ಏಕರಾಶಿಗತರಾಗಿ ಪಾಪದೃಷ್ಟ ಅಥವಾ ಪಾಪಯುತರಾದರೆ, ಮುಖ ದುರ್ವಾಸನೆ.

೧೧. ಶನಿಯು ಸೂರ್ಯ ಬುಧರೊಡನೆ ಇದ್ದರೆ, ಬಾಲ್ಯದಲ್ಲಿ ಅತ್ಯಂತ ನಷ್ಟದಿಂದ ದಾರಿದ್ರ್ಯಹೊಂದಿದರೂ, ಅನಂತರ ಶ್ರೀಮಂತನಾಗುವನು.

೧೨. ಶನಿಯು ಕೇತುವಿನೊಡನೆ ದಶಮ ಭಾವದಲ್ಲಿದ್ದರೆ, ಬಾಲ್ಯದಲ್ಲಿ ಪರಗೃಹವಾಸ. (ಪರರ ಮನೆಯಲ್ಲಿ ಬೆಳೆದು ಬಾಳುವನು.)

೧೩. ಮೀನದಲ್ಲಿ ಕುಜದಶೆಯು ಅನಿಷ್ಟ ಸೂಚಕ; ಪಿತೃ ಮರಣ ಸೂಚಕ.

೧೪. ವೃಷಭದಲ್ಲಿ ಸೂರ್ಯನಿದ್ದರೆ ಸೂರ್ಯದಶೆಯಲ್ಲಿ ಅನ್ಯರ ಮನೆಯಲ್ಲಿ ಸುಖದಿಂದ ಬಾಳುವನು.

೧೫. ಕನ್ಯೆಯಲ್ಲಿ ಗುರುವಿದ್ದರೆ ತಾಯಿಯು ರೋಗಪೀಡಿತಳು.

೧೬. ಸಿಂಹದಲ್ಲಿ ರವಿಯಿದ್ದು, ವೃಶ್ಚಿಕದಲ್ಲಿ ಶನಿಯಿದ್ದರೆ ಎರಡು ವಿವಾಹಗಳು; ಎರಡನೇ ಹೆಂಡತಿಯಿಂದ ಬಹುಶಃ ಮಕ್ಕಳು.

೧೭. ದಶಮದಲ್ಲಿ ಶನಿಯಿದ್ದರೆ ಮರಣಸಮಯದಲ್ಲಿ ಪುತ್ರನು ಹತ್ತಿರವಿರಲಾರನು.

೨. ವೃಷಭ ಲಗ್ನ

೧. ಕುಂಭದಲ್ಲಿ ಕುಜನಿದ್ದರೆ, ಮಹಾಪಾಪಿಯಾಗುವನು; ದರೋಡೆ ವ್ಯಭಿಚಾರ ನಡೆಸಿ, ಹಿಂಸಾತ್ಮಕನಾಗುವನು.

೨. ಚಂದ್ರನು ಈ ಲಗ್ನದಲ್ಲಿದ್ದು ಶನಿದೃಷ್ಟನಾದರೆ ಧನಿಕನಾಗಿ ಪ್ರಭಾವಶಾಲಿಯಾಗುವನು; ಚಂದ್ರನು ೧೪ ಅಂಶಗಳೊಳಗಿದ್ದರೆ ತಾಯಿಗೆ ಕೆಟ್ಟದು ಹಾಗೂ ಅಪಾಯಕರ; ೧೬ ಅಂಶ(ಡಿಗ್ರಿ)ಗಳನಂತರವಿದ್ದರೆ, ಬಾಲ್ಯದಲ್ಲಿ ಪಿತೃಮರಣ.

೩. ಕರ್ಕಾಟಕದಲ್ಲಿ ಬುಧನಿದ್ದರೆ ಸುಖಮಗ್ನನಾಗುವನು.

೪. ಮಕರದಲ್ಲಿ ಗುರುವಿದ್ದರೆ, ಮುಖದ ಮೇಲೆ ರೋಮಗಳ ನ್ಯೂನತೆ.

೫. ಮಿಥುನದಲ್ಲಿ ಮಕರಾಂಶದಲ್ಲಿ ಕುಜನಿದ್ದರೆ, ವ್ಯಭಿಚಾರ.

೬. ವೃಶ್ಚಿಕದಲ್ಲಿ ಶುಕ್ರನಿದ್ದರೆ ದ್ವಿಕಳತ್ರಯೋಗ.

೭. ಶನಿಕುಜರು ಲಗ್ನದಲ್ಲಿದ್ದರೆ, ಅನಾಯಾಸದ ಮರಣ.

೮. ರವಿಶನಿಗಳು ಧನುರಾಶಿಯಲ್ಲಿದ್ದರೆ ಮಕ್ಕಳ ಜನನದನಂತರ ಸುಖವಿಲ್ಲ.

೩. ಮಿಥುನ ಲಗ್ನ

೧. ರವಿ ಮೇಷದಲ್ಲಿದ್ದರೆ, ೭ ಮಂದಿ ಸೋದರಸೋದರಿಯರು; ಸಿಂಹದಲ್ಲಿ ಚಂದ್ರನಿದ್ದರೆ, ಸಹೋದರ-ಸಹೋದರಿಯರ ಸಮಾನ ಸಂಖ್ಯೆ.

೨. ಕರ್ಕಾಟಕದಲ್ಲಿ ಶುಕ್ರನಿದ್ದರೆ, ಅಕಸ್ಮಾತ್ ಧನಿಕ.

೩. ಕರ್ಕಾಟಕದಲ್ಲಿ ಗುರುವಿದ್ದರೆ, ಅಭ್ಯುದಯದನಂತರ ನಿರ್ಧನಿಕ ನಾಗಿ ೪೫ ವರ್ಷಗಳ ತನಕ ಕಷ್ಟ; ಶುಕ್ರ ಬುಧರು ಕರ್ಕಾಟಕದಲ್ಲಿದ್ದರೆ, ೪೫ ವರ್ಷಗಳ ತನಕ ಧನಸಂಗ್ರಹ.

೪. ಕರ್ಕಾಟಕದಲ್ಲಿ ಚಂದ್ರನಿದ್ದರೆ ಚಂದ್ರದಶೆ ಮರಣಸೂಚಕ.

೫. ಮಕರದಲ್ಲಿ ಬುಧನಿದ್ದರೆ, ತಾಂತ್ರಿಕ ಹಾಗೂ ರಾಸಾಯನಿಕ ನಾಗಿ ಧಾರಾಳ ಸಂಪಾದನೆ.

೬. ಚಂದ್ರ ಶನಿ ಮಕರದಲ್ಲಿದ್ದರೆ, ಉದರದಲ್ಲಿ ವಲ್ಮೀಕ ರೋಗ (Cancer of the stomach).

೭. ಮಿಥುನದಲ್ಲಿ ಬುಧನಿದ್ದರೆ, ಶ್ವಾಸಕಾಸ ರೋಗ.

೮. ಕನ್ಯೆಯಲ್ಲಿದ್ದ ಬುಧ ಪಾಪಯುತ ಪಾಪದೃಷ್ಟನಾದರೆ, ಮಾತೃ ಗೃಹಕ್ಕೆ ಪ್ರಾರಂಭದಲ್ಲಿ ಅಶುಭಸೂಚಕ. ಕೆಲವು ಕಾಲದನಂತರ ಅಭ್ಯು ದಯಕಾರಕ.

೯. ಚತುರ್ಥ ಭಾವದಲ್ಲಿ ಕೇತುವಿದ್ದರೆ, ದೇಶಾಂತರಗಮನ. ಆ ಕೇತು ಪಾಪಯುತನಾದರೆ, ಅವನ ಪತ್ತೆ ಇರದು.

೧೦. ತುಲೆಯಲ್ಲಿ ಶನಿ; ಮಕ್ಕಳಿಗೆ ಅನಿಷ್ಟ.

೧೧. ತುಲೆಯಲ್ಲಿ ರಾಹು; ನ್ಯಾಯಶಾಸ್ತ್ರಜ್ಞ.

೧೨. ಕನ್ಯೆಯಲ್ಲಿ ಕುಜ. ಪ್ರಥಮ ೧೮ ಡಿಗ್ರಿಗಳೊಳಗಿದ್ದರೆ, ಒಂದು ಅಂಗಹೀನ.

೧೩. ಕರ್ಕಾಟಕದಲ್ಲಿ ರಾಹು, ರಾಹುದಶೆಯಲ್ಲಿ ಅಥವಾ ಅನ್ಯದಶೆ ಗಳಲ್ಲಿ ರಾಹುಭುಕ್ತಿಯಲ್ಲಿ ಕಪಟಕ್ಕೆ ಒಳಗಾಗಿ ಧನನಷ್ಟ.

೧೪. ಚಂದ್ರ ಸೂರ್ಯರು ಪರಸ್ಪರ ತ್ರಿಕೋಣದಲ್ಲಿದ್ದರೆ ಧನಿಕ ನಾಗುವನು. ಆದರೆ, ಅವರು ಷಷ್ಠಾಷ್ಟಮದ್ವಾದಶಗಳಲ್ಲಿರಬಾರದು.

೧೫. ಮೀನದಲ್ಲಿ ಬುಧನಿದ್ದರೆ, ನಿರಂತರ ಪ್ರಯಾಣನಿರತನು.

೧೬. ಮೀನದಲ್ಲಿ ರಾಹುವಿದ್ದರೆ, ಗಂಗಾಸ್ನಾನ ಅನೇಕ ಸಾರಿ ಮಾಡುವನು. ಸಿಂಹದಲ್ಲಿ ಸೂರ್ಯನಿದ್ದರೆ ಅಧೀನದಲ್ಲಿ ಅನೇಕರಿರುವರು.

೪. ಕರ್ಕಾಟಕ ಲಗ್ನ

೧. ಮೇಷದಲ್ಲಿ ಕುಜನಿದ್ದರೆ ಸ್ವೇಚ್ಛಾಚಾರಿ ಹಾಗೂ ಹಟಸಾಧಕನು; ಸಮಾಜಹಿತ ಮಾಡಲಾರನು.

೨. ಸಿಂಹದಲ್ಲಿ ಕುಜನಿದ್ದರೆ, ಪಿತೃಧನದ ಅಧಿಕಾಂಶವನ್ನು ಬಾಲ್ಯದ ಏಳು ವರ್ಷಗಳಲ್ಲಿಯೇ ನಾಶಮಾಡುವನು.

೩. ಶುಕ್ರನು ಲಗ್ನದಲ್ಲಿದ್ದರೆ ಗಂಡನು ಅತ್ಯಂತ ವ್ಯಭಿಚಾರಿ.

೪. ದ್ವಾದಶದಲ್ಲಿ ಕುಜನಿದ್ದರೆ, ಸತ್ರ ಬ್ರಹ್ಮಚಾರಿಗಳ ಉಪದ್ರವದಿಂದ ಪೀಡಿತ.

೫. ವೃಷಭದಲ್ಲಿ ಗುರುವಿದ್ದರೆ, ಎರಡು ವಿವಾಹಗಳು. ಪ್ರಥಮ ಪತ್ನಿಯು ಗುರುದಶೆಯಲ್ಲಿ ಮರಣಹೊಂದುವಳು.

೬. ಮಕರದಲ್ಲಿ ಕುಜನಿದ್ದರೆ, ವಾಗ್ಮಿ ಹಾಗೂ ಕಾರ್ಯಸಾಧಕ.

೭. ವೃಶ್ಚಿಕದಲ್ಲಿ ಸೂರ್ಯನೊಡನೆ ರಾಹು ಅಥವಾ ಕೇತುವಿದ್ದರೆ ಅಂಥವರ ಪುತ್ರನೊಬ್ಬನು ದತ್ತಕ್ಕೆ ಕೊಡಲ್ಪಡುವನು.

೮. ಸೂರ್ಯಗುರುಗಳು ಒಂದೇ ರಾಶಿಯಲ್ಲಿದ್ದರೆ ಅತ್ಯಂತ ಶ್ರೇಷ್ಠ ಪುತ್ರನೊಬ್ಬನು ಸಾಯುವನು.

೯. ಸೂರ್ಯ ಶುಕ್ರರು ಒಂದೇ ರಾಶಿಯಲ್ಲಿದ್ದರೆ, ವ್ಯಭಿಚಾರಿ.

೧೦. ಷಷ್ಠಾಷ್ಟಮದ್ವಾದಶಗಳಲ್ಲಿ ಇಲ್ಲದೆ, ಚಂದ್ರ ಸೂರ್ಯರು ಪರಸ್ಪರ ತ್ರಿಕೋಣಗತರಾದರೆ, ಧನಸಂಪಾದನೆಗೆ ಅತ್ಯುತ್ತಮ.

೧೧. ಕುಂಭ—ಅಷ್ಟಮದಲ್ಲಿ ಶನಿಯಿದ್ದರೆ, ದೀರ್ಘಾಯು.

೧೨. ಚಂದ್ರನು ಸಿಂಹದಲ್ಲಿದ್ದರೆ, ಚಂದ್ರದಶೆಯು ಕೆಟ್ಟದು.

೧೩. ಗುರು ಏಕಾದಶದಲ್ಲಿದ್ದರೆ, ಪತ್ನಿಗೆ ಅನಿಷ್ಟಸೂಚಕ.

೧೪. ಗುರು ಶನಿಗಳು ಏಕಾದಶದಲ್ಲಿದ್ದರೆ, ೫೭ನೇ ಹಾಗೂ ೫೮ನೇ ವರ್ಷಗಳು ಅನಿಷ್ಟದಾಯಕ.

೫. ಸಿಂಹ ಲಗ್ನ

೧. ವೃಶ್ಚಿಕದಲ್ಲಿ ಶಶಿಯಿದ್ದರೆ, ೩೫ನೇ ವಯಸ್ಸಿನ ನಂತರ, ಕೀರ್ತಿ ಪ್ರತಾಪಸೂಚಕ; ಆದರೆ, ಅವಸಾನವು ಸುಖದಾಯಕವಾಗದು.

೨. ಮಿಥುನದಲ್ಲಿ ಶನಿ ಇದ್ದರೆ, ವಿವಾಹದ ಮುಂಚಿತ ಅನೇಕ ಮಹತ್ ವಿಘ್ನಗಳು ಸಂಭವಿಸಿ, ವಿವಾಹದನಂತರವೂ ಪತ್ನೀಮರಣ ಸೂಚಕ.

೩. ಧನುವಿನಲ್ಲಿ ರಾಹುವಿದ್ದರೆ, ರಾಹುದೆಶೆಯಲ್ಲಿ ಅತ್ಯಂತ ಧನ ಲಾಭ; ಆದರೆ, ಈ ದೆಶೆಯಲ್ಲಿ ಪುತ್ರಪುತ್ರಿಯರ ಹಾಗೂ ಪತ್ನಿಯ ಮರಣವು ಆಗುವುದು.

೪. ಲಗ್ನದಲ್ಲಿ ಕುಜನಿದ್ದರೆ, ಏಳನೇ ವರ್ಷದಲ್ಲಿ ಪಿತನಿಗೆ ಧನನಷ್ಟ ಹಾಗೂ ಸ್ಥಾನಹಾನಿ ಇತ್ಯಾದಿ.

೫. ತುಲೆಯಲ್ಲಿ ಶನಿಯಿದ್ದರೆ ವ್ಯಭಿಚಾರ.

೬. ಕರ್ಕಾಟಕದಲ್ಲಿ ಕುಜನಿದ್ದರೆ ಉತ್ತಮ ಫಲದಾಯಕ.

೭. ಮೀನದಲ್ಲಿ ಗುರು ಚಂದ್ರರು ಇದ್ದರೆ ಸಂತಾನವಾಗದು ಅಥವಾ ಇರದು.

೮. ಚಂದ್ರಕುಜರು ಸಿಂಹದಲ್ಲಿ ಅಥವಾ (ಮೀನದಲ್ಲಿ) ಏಕರಾಶಿ ಗತವಾದರೆ, ೫೦ ವರ್ಷ ವಯಸ್ಸಿನ ತವಕ ಪರದೇಶ ವಾಸ.

೯. ಕುಜನು ಸೂರ್ಯಬುಧರೊಡನೆ ಒಂದೇ ರಾಶಿಯಲ್ಲಿದ್ದರೆ ಅತ್ಯಂತ ಅನಿಷ್ಟಸೂಚಕ.

೧೦. ದ್ವಿತೀಯದಲ್ಲಿ ಕುಜನಿದ್ದರೆ ಕುಟುಂಬಪೋಷಕ.

೧೧. ಕುಜನು ಪಂಚಮದಲ್ಲಿದ್ದರೆ ವಿದ್ಯೆಯು ಕಡಿಮೆಯಿದ್ದರೂ ಪಂಡಿತನಾಗುವನು.

೧೨. ವೃಶ್ಚಿಕದಲ್ಲಿ ಶನಿಯಿದ್ದರೆ ಜೀವಮಾನದಲ್ಲಿ ಶ್ರೇಯಸ್ಸು, ವಿಜಯ, ಕೀರ್ತಿ ಇತ್ಯಾದಿ.

೧೩. ಗುರು ಶುಕ್ರರು ಲಗ್ನದಲ್ಲಿದ್ದು, ಬುಧನು ತೃತೀಯದಲ್ಲಿದ್ದರೆ, ಒಬ್ಬಳೇ ಭಗಿನಿ; ಅವಳು ಸಹ ಕಿರಿಯವಳು.

೧೪. ಶುಕ್ರನೊಬ್ಬನೇ ಲಗ್ನದಲ್ಲಿದ್ದರೆ, ಶುಕ್ರದಶೆಯ ರಾಹುಭುಕ್ತಿಯಲ್ಲಿ ಚರ್ಮರೋಗ.

೧೫. ಧನುಸ್ಸಿನಲ್ಲಿ ರವಿಶನಿಗಳಿದ್ದರೆ, ನಿಸ್ಸಂತತಿ.

೧೬. ವೃಶ್ಚಿಕದಲ್ಲಿ ಚಂದ್ರನಿದ್ದರೆ, ಚಂದ್ರದಶೆಯಲ್ಲಿ ಮಾತೃನಿರ್ಯಾಣ ಅಥವಾ ಪತ್ನೀ ಮರಣ.

೬. ಕನ್ಯಾ ಲಗ್ನ

೧. ಶನಿಯು ಮೇಷದಲ್ಲಿದ್ದರೆ ಒಳ್ಳೇದು ಹಾಗೂ ಧನದೃಷ್ಟಿಯಿಂದ ಅತ್ಯಂತ ಅಭ್ಯುದಯಕರ.

೨. ಧನುಸ್ಸಿನಲ್ಲಿ ಗುರುವಿದ್ದರೆ ನಲ್ವತ್ತೇಳನೇ ವಯಸ್ಸಿನಲ್ಲಿ ಭೂಮಿ ಕೊಂಡುಕೊಳ್ಳುವನು.

೩. ಪಂಚಮದಲ್ಲಿ ಶನಿಯಿದ್ದು, ಕುಜದೃಷ್ಟನಾದರೆ, ಧನಿಕನಾಗುವನು.

೪. ಮಕರದಲ್ಲಿ ಕುಜನಿದ್ದರೆ ಮೂವರು ಪುತ್ರರು ಜನಿಸುವರು; ಒಬ್ಬನು ಎಳೇ ಪ್ರಾಯದಲ್ಲಿ ಸಾಯುವನು; ಇಬ್ಬರು ದೀರ್ಘಾಯುಗಳಾಗುವರು.

೫. ದ್ವಿತೀಯಾಧಿಪತಿಯು ಏಕಾದಶದಲ್ಲಿ ಅಥವಾ ದ್ವಿತೀಯದಲ್ಲಿದ್ದು, ಪಾಪಗ್ರಹ ದೃಷ್ಟ ಅಥವಾ ಯುತನಾದರೆ, ವಿವಾಹವಿಚ್ಛೇದವಾಗುವುದು; ಹಾಗೂ ಆರ್ಥಿಕ ತಾಪತ್ರಯವು ಸಂಭವನೀಯ.

೬. ಕುಂಭದಲ್ಲಿ ಕುಜನಿದ್ದರೆ, ಕ್ರಿಮಿನಲ್ ವ್ಯಾಜ್ಯಗಳಿಂದ ಅಪಮಾನ ಇತ್ಯಾದಿ.

೭. ಚತುರ್ಥದಲ್ಲಿ ಸೂರ್ಯನಿದ್ದರೆ, ರಾಜಯೋಗ; ಸೂರ್ಯನೊಡನೆ ಬುಧನಿದ್ದರೆ, ಅತ್ಯಂತ ಶುಭ ಹಾಗೂ ಅತ್ಯಧಿಕ ಕೀರ್ತಿ.

೭. ತುಲಾ ಲಗ್ನ

೧. ಕುಜನು ಕರ್ಕಾಟಕದಲ್ಲಿದ್ದರೆ, ವಿಧವಿಧದ ಪಾಪಕೃತ್ಯಗಳನ್ನು ಮಾಡುವನು.

೨. ಗುರು ಮಕರದಲ್ಲಿದ್ದರೆ, ಹದಿನಾರನೇ ವಯಸ್ಸಿನ ತನಕ ಅಭ್ಯುದಯಕ್ಕೆ ತೊಂದರೆ ಹಾಗೂ ಹಾನಿಯಾಗುವದು; ಗುರುದಸೆಯು ಪ್ರಾರಂಭವಾದೊಡನೆ, ಒಬ್ಬ ಸ್ತ್ರೀಯಿಂದ ಸಂಕಷ್ಟಕ್ಕೀಡಾಗುವುದು; ಆದರೆ, ದಶೆಯಲ್ಲಿ ಸ್ಥಾನ, ಮಾನ, ಪ್ರತಾಪ, ಅಭ್ಯುದಯ ಇತ್ಯಾದಿ.

೩. ಪಂಚಮದಲ್ಲಿ ಶನಿಯಿದ್ದು ಕುಜದೃಷ್ಟನಾದರೆ, ಧನಿಕ ಹಾಗೂ ಶ್ರೀಮಂತ.

೪. ಮಕರದಲ್ಲಿ ಶುಕ್ರನಿದ್ದರೆ, ವೃತ್ತಾಕಾರದ ಮುಖವುಳ್ಳವನು.

೫. ಮೀನದಲ್ಲಿ ಬುಧನಿದ್ದರೆ, ಒಳ್ಳೇದು; ಆಕಸ್ಮಾತ್ ಧನಪ್ರಾಪ್ತಿ.

೬. ಕನ್ಯೆಯಲ್ಲಿ ಬುಧನಿದ್ದರೆ, ಅತ್ಯಂತ ಅನಿಷ್ಟ ಸೂಚಕ; ಹಾಗೂ ರೋಗಪೀಡಿತ.

೭. ಬುಧಶನಿಗಳು ಒಟ್ಟಿಗಿದ್ದರೆ, ಪ್ರಾಯ ೪೦ರಿಂದ ೪೪ರ ತನಕ ಮಹತ್ಕಷ್ಟ ಹಾಗೂ ಭಾಗ್ಯಹಾನಿ ಮತ್ತು ಸಕಲ ತರದ ವಿಪತ್ತುಗಳು.

೮. ರಾಹು ಕರ್ಕಾಟಕದಲ್ಲಿದ್ದರೆ ಉತ್ತಮ ಫಲದಾಯಕ.

೮. ವೃಶ್ಚಿಕ ಲಗ್ನ

೧. ಬುಧನು ಕನ್ಯೆಯಲ್ಲಿದ್ದರೆ, ಒಂದು ಸಮಯ ಅತ್ಯಂತ ಅಭ್ಯುದಯ ವೈಭವದಿಂದ ಮೆರೆಯುವನು; ಅನಂತರ ಕಷ್ಟದುಃಖಗಳು ಬಂದೊದಗುವುವು.

೨. ಸೂರ್ಯ ಬುಧರು ಏಕರಾಶಿಗತರಾಗಿ ಕೇಂದ್ರದಲ್ಲಿದ್ದು ಸಿಂಹದಲ್ಲಿದ್ದರೆ ಮೆಜಿಸ್ಟ್ರೇಟ ಅಧಿಕಾರ ಹೊಂದುವನು.

೩. ದ್ವಿತೀಯದಲ್ಲಿ ಶುಕ್ರನಿದ್ದರೆ, ಆಕಸ್ಮಿಕ ಶ್ರೀಮಂತನಾಗುವನು.

೪. ವೃಷಭದಲ್ಲಿ ಗುರುವಿದ್ದರೆ, ಪುತ್ರನು ಅವಿಧೇಯನಾಗುವನು.

೫. ಕುಂಭದಲ್ಲಿ ಶನಿಯಿದ್ದರೆ, ಹಳೇ ಮನೆಯನ್ನು ಕೊಂಡುಕೊಳ್ಳುವನು.

೬. ಕರ್ಕಾಟಕದಲ್ಲಿ ಶನಿಯಿದ್ದರೆ ಪರರ ಧನವನ್ನು ಹೊಂದುವನು; ಅಥವಾ ದತ್ತ ಪುತ್ರನಾಗಿ ಮೆರೆಯುವನು.

೭. ಮಕರದಲ್ಲಿ ಗುರುವಿದ್ದರೆ ಪಿತೃಧನ ಅಥವಾ ಸ್ವಾರ್ಜಿತ ಧನವನ್ನು ಕಳೆದುಕೊಳ್ಳುವನು.

೮. ವೃಷಭದಲ್ಲಿ ಶುಕ್ರನಿದ್ದರೆ, ದ್ವಿಕಳತ್ರ ಯೋಗ.

೯. ಮೀನದಲ್ಲಿ ಬುಧನಿದ್ದರೆ, ಧನಿಕ ಹಾಗೂ ಭಾಗ್ಯಶಾಲಿಯಾಗುವನು.

೧೦. ಶನಿಯೊಬ್ಬನೇ ಕರ್ಕಾಟಕದಲ್ಲಿದ್ದರೆ, ಅಸಾಧ್ಯ ರೋಗದಿಂದ ಬಳಲುವನು. ಆದರೆ, ಹೆಂಡತಿಯ ಸಂಬಂಧಿಕರಿಂದ ಸಹಾಯವು ಲಭಿಸುವದು.

೧೧. ತುಲೆಯಲ್ಲಿ ಬುಧನಿದ್ದರೆ, ಪ್ರಸಿದ್ಧ ಪ್ರಾಧ್ಯಾಪಕ ಹಾಗೂ ವಾಕ್ಪಟು.

೧೨. ಚತುರ್ಥದಲ್ಲಿನ ಗುರುದಶೆಯು ಒಳ್ಳೇ ಫಲವನ್ನು ಕೊಡುವದಿಲ್ಲ.

೧೩. ವೃಷಭದಲ್ಲಿ ಸೂರ್ಯನಿದ್ದರೆ, ದಾಂಪತ್ಯವು ಸುಖಮಯವಾಗದು.

೧೪. ಮೀನದಲ್ಲಿ ಕುಜನಿದ್ದರೆ, ಕುಜದಶೆಯು ಅನಿಷ್ಟ ಸೂಚಕ.

೧೫. ಸೂರ್ಯಶನಿಗಳು ತುಲೆಯಲ್ಲಿದ್ದರೆ, ಗರ್ಭಾದಾನಕಾಲದಿಂದ ಪಿತನಿಗೆ ದುಃಖವು ಬಂದೊದಗಬೇಕು.

೯. ಧನುರ್ಲಗ್ನ

೧. ಗುರು ಮಕರದಲ್ಲಿದ್ದರೆ, ೪೫ನೇ ವಯಸ್ಸಿನ ತನಕ ಅಭ್ಯುದಯ ಹಾಗೂ ಧನವೈಭವ ಖಂಡಿತವಿರುವುದು; ಆದರನಂತರ ಧನಹಾನಿಯು ಸಂಭವನೀಯ. ೩೫—೩೯ ಅಥವಾ ೪೫ನೇ ವಯಸ್ಸಿನಲ್ಲಿ ಕಳತ್ರನಾಶ.

೨. ಕುಂಭದಲ್ಲಿ ಶನಿಯಿದ್ದರೆ ವ್ಯಭಿಚಾರಿ. ಕುಂಭದಲ್ಲಿ ಶನಿಯು ಸಂತತಿಗೆ ಅನಿಷ್ಟಕಾರಕ; ಮುದಿತನದಲ್ಲಿ ತತ್ತ್ವಜ್ಞಾನ ನಿರತ.

೩. ಮೇಷದಲ್ಲಿ ಶುಕ್ರನಿದ್ದರೆ ಭ್ರಾತೃಜನಕ್ಕಿಂತ ಹೆಚ್ಚಿನ ವಿಷಯಸುಖವುಳ್ಳವನು.

೪. ಮೀನದಲ್ಲಿ ಸೂರ್ಯನಿದ್ದರೆ ವಕೀಲ.

೫. ಶುಕ್ರನು ಕುಂಭದಲ್ಲಿದ್ದು ತುಲೆಯುಲ್ಲಿ ಶನಿಯಿದ್ದರೆ, ಪಿತೃಧನವನ್ನೆಲ್ಲಾ ಪಡೆಯುವನು; ಅನ್ಯಸಹೋದರರು ಪಡೆಯರು.

೬. ಮೀನದಲ್ಲಿ ಶುಕ್ರನಿದ್ದರೆ ಅತ್ಯಂತ ಜಯಶಾಲಿ ಹಾಗು ಖ್ಯಾತಿಗೊಂಡವನು.

೭. ಕುಂಭದಲ್ಲಿ ಶುಕ್ರನಿದ್ದರೆ ಕೈ ಮುರಿದುಕೊಳ್ಳುವನು.

೮. ಶುಕ್ರನು ಶನಿಕ್ಷೇತ್ರದಲ್ಲಿದ್ದರೆ ಪರದೇಶದಲ್ಲಿ ಸಂಚರಿಸಿ ಅಂತ್ಯದಲ್ಲಿ ಮನೆ ಸೇರುವನು.

೯. ಷಷ್ಠದಲ್ಲಿ ರಾಹುವಿದ್ದರೆ, ಅನಾರೋಗ್ಯದಿಂದ ಬಳಲುವನು.

೧೦. ಮಕರ ಲಗ್ನ

೧. ತುಲೆಯಲ್ಲಿ ಕುಜನಿದ್ದರೆ ಅನೇಕ ದುಷ್ಕೃತ್ಯಗಳನ್ನು ಮಾಡುವನು.

೨. ಕುಂಭದಲ್ಲಿ ಶನಿಯಿದ್ದರೆ ಚಿತ್ತಭ್ರಮೆಯಿಂದ ಪೀಡಿತನಾಗುವದು.

೩. ಧನುಸ್ಸಿನಲ್ಲಿ ಕುಜನಿದ್ದರೆ ಭೂಮಿ ಲಾಭವಾದರೂ ಮನಸ್ಸಿಗೆ ಶಾಂತಿಯಿರುವುದಿಲ್ಲ.

೪. ಸೂರ್ಯ ಬುಧರು ಧನುಸ್ಸಿನಲ್ಲಿದ್ದರೆ ರಾಜಯೋಗ.

೫. ಮೇಷದಲ್ಲಿ ಶನಿಯಿದ್ದರೆ ಶನಿದಶೆಯಲ್ಲಿ ದಾಂಪತ್ಯಸುಖವಿರದು.

೬. ಕರ್ಕಾಟಕದಲ್ಲಿ ಗುರುವಿದ್ದರೆ ಕಳತ್ರಸುಖ ನೀಡುವುದಿಲ್ಲ.

೭. ಮೇಷರಾಶಿಯುಲ್ಲಿ ಹಾಗು ಮೇಷಾಂಶದಲ್ಲಿ ಶನಿಯಿದ್ದು ಪಾಪಗ್ರಹದೃಷ್ಟನಾದರೆ ಯಾವಾಗಲೂ ಕ್ರಿಮಿನಲ್ ವ್ಯವಹರಣೆಯಲ್ಲಿರುವನು.

೮. ಸಿಂಹದಲ್ಲಿ ಬುಧನಿದ್ದರೆ ಶ್ವಾಸರೋಗಿ.

೯. ತುಲೆಯಲ್ಲಿ ಶನಿಯಿದ್ದರೆ ತತ್ತ್ವಜ್ಞಾನಿ.

೧೦. ತುಲೆಯುಲ್ಲಿ ಶನಿಯಿದ್ದರೆ, ಶನಿದಶೆಯಲ್ಲಿ ಪಿತೃಮರಣ.

೧೧. ಮಕರದಲ್ಲಿ ಚಂದ್ರನಿದ್ದು ಕರ್ಕಾಟಕದಲ್ಲಿ ಕುಜನಿದ್ದರೆ ವಿವಾಹಕ್ಕೆ ಅತ್ಯಂತ ವಿಘ್ನಗಳು ಹಾಗೂ ವಿಲಂಬ; ವಿವಾಹದ ನಂತರ ದಾಂಪತ್ಯಜೀವನವು ಅತ್ಯಂತ ಸುಖಮಯ.

೧೨. ಸಿಂಹದಲ್ಲಿ ಸೂರ್ಯನಿದ್ದರೆ ದೀರ್ಘಾಯು ಹಾಗೂ ಸದಾ ದೈವಕೃಪಾಕಟಾಕ್ಷಯುಕ್ತ.

೧೩. ವೃಷಭದಲ್ಲಿ ಗುರುವಿದ್ದರೆ ತಾಯಿಯೊಡನೆ ಹಾಗು ಮಕ್ಕಳೊಡನೆ ದ್ವೇಷಮಯಜೀವನ. ಭೂಮಿಯ ಉತ್ಪತ್ತಿಯು ಲಭಿಸದು.

೧೪. ಅಷ್ಟಮ ಅಥವಾ ದ್ವಾದಶದಲ್ಲಿ ಬುಧನಿದ್ದು ಶುಭದೃಷ್ಟನಾಗದಿದ್ದರೆ ಶ್ವಾಸರೋಗಪೀಡಿತ.

೧೫. ಮೇಷದಲ್ಲಿ ಗುರುವಿದ್ದರೆ ತಾಯಿಯೊಡನೆ ಹಾಗೂ ಸಂಬಂಧಿಕರೊಡನೆ ಜಗಳಾಡುವನು. ಮೀನದಲ್ಲಿ ಬುಧನಿದ್ದರೆ, ಚಂಚಲಬುದ್ಧಿಯುವನು. ಶನಿ ಅದೇ ಕಾಲದಲ್ಲಿ ಕುಂಭದಲ್ಲಿದ್ದರೆ ಅತ್ಯಂತ ಅಸ್ಥಿರಚಿತ್ತ.

೧೬. ಕುಂಭದಲ್ಲಿ ಶನಿಯಿದ್ದರೆ ಸ್ವೇಚ್ಛಾಚಾರಿ.

೧೧. ಕುಂಭ ಲಗ್ನ

೧. ಶನಿಯು ಕರ್ಕಾಟಕದಲ್ಲಿದ್ದರೆ, ಅಸಾಧ್ಯ ರೋಗದಿಂದ ಬಳಲುವನು.

೨. ರವಿಯು ಧನುಸ್ಸಿನಲ್ಲಿದ್ದರೆ, ಬಾಲ್ಯದಲ್ಲಿ ಎತ್ತರದಿಂದ ಪತನ.

೩. ಶುಕ್ರನು ಮಕರ (ದ್ವಾದಶ)ದಲ್ಲಿದ್ದರೆ, ತಾಯಿಯ ಆಯುರ್ದಾಯಕ್ಕೆ ಅನಿಷ್ಟಕಾರಕ; ಆದರೆ, ಸ್ವಂತ ಅಭ್ಯುದಯ ಹಾಗೂ ಧನಲಾಭಕ್ಕೆ ಉತ್ತಮ.

೪. ವೃಶ್ಚಿಕದಲ್ಲಿ ಚಂದ್ರನಿದ್ದರೆ, ಧನವೈಭವ.

೫. ಮೀನದಲ್ಲಿ ರಾಹುವಿದ್ದರೆ, ಒಳ್ಳೇ ಫಲ ನೀಡುತ್ತದೆ.

೬ ಮೀನದಲ್ಲಿ ಗುರುವಿದ್ದರೆ ವಕೀಲನಾಗದಿದ್ದರೂ, ಸರಕಾರೀ ಕಾನೂನಿನ ಉತ್ತಮ ಜ್ಞಾನವನ್ನು ಹೊಂದಿ ಪ್ರವೀಣನಾಗುವನು.

೭. ಸಿಂಹದಲ್ಲಿ ರಾಹುವಿದ್ದಾಗ ಹೆಂಡತಿಯ ಅಧೀನನಾಗಿ ವರ್ತಿಸುವನು.

೮. ಕರ್ಕಾಟಕದಲ್ಲಿ ಶುಕ್ರ ಅಥವಾ ಚಂದ್ರನಿದ್ದರೆ, ಧನ ಸಂಪನ್ನತೆಯಿಂದ ಬಹುಕಾಲ ಮೆರೆಯುವನು; ಕೆಲವರಿಗೆ ದತ್ತಸ್ವೀಕಾರದಿಂದ ಈ ಸ್ಥಿತಿಯು ಬಂದೊದಗುವುದು.

೯. ಮಕರದಲ್ಲಿ ಶನಿಯಿದ್ದರೆ, ಖಲ್ವಾಟ (bald-headed ಅಥವಾ ಬೋಳು ತಲೆ) ಆಗುವನು.

೧೦. ವೃಷಭ (ಚತುರ್ಥ)ದಲ್ಲಿ ಗುರುವಿದ್ದರೆ ದ್ವಿಕಳತ್ರಕಾರಕ.

೧೨. ಮೀನ ಲಗ್ನ

೧. ಕರ್ಕಾಟಕದಲ್ಲಿ ಬುಧನಿದ್ದರೆ ಐವತ್ತೊಂದನೇ ವಯಸ್ಸಿನ ತನಕ ಉತ್ತಮ ಅಭ್ಯುದಯ; ಅನ್ಯರ ಸೊತ್ತನ್ನು ಪಡೆಯುವನು; ಹಾಗು ದತ್ತ ಪುತ್ರನಾಗಲು ಸಾಧ್ಯ.

೨. ಕುಂಭದಲ್ಲಿ ಚಂದ್ರನಿದ್ದರೆ ಮೂವತ್ತೆರಡು ವರ್ಷಗಳ ನಂತರ ಪುತ್ರಸಂತಾನವಾಗುವದು; ಆದರೆ, ದೀರ್ಘಾಯುವಾಗುವುದು ಸಂಶಯ ಕಾರಕ.

೩. ತೃತೀಯದಲ್ಲಿ ರವಿಯಿದ್ದಾಗ ಶ್ವಾಸರೋಗಿ.

೪. ದಶಮದಲ್ಲಿ ರವಿಯಿದ್ದರೆ ಅಧ್ಯಾಪಕ ವೃತ್ತಿಯಲ್ಲಿ ಹೆಸರು ಗಳಿಸುವನು.

೫. ತುಲೆಯಲ್ಲಿ ಶುಕ್ರನಿದ್ದರೆ ಪ್ರಥಮ ಪತ್ನಿಯು ಅಭ್ಯುದಯ ಕಾರಕಳು. ಆದರೆ, ತಾರುಣ್ಯದಲ್ಲಿಯೇ ಸಾಯುವಳು.

೬. ವೃಶ್ಚಿಕದಲ್ಲಿ ಚಂದ್ರನಿದ್ದರೆ ಚಂದ್ರದಶೆಯು ಉತ್ತಮ ಫಲ ದಾಯಕ—ಹಾಗು ವಿಧವಿಧದಿಂದ ಧನ ನೀಡುವದು.

೭. ವೃಷಭದಲ್ಲಿ ಕುಜನಿದ್ದರೆ ಸೇವಾವೃತ್ತಿ ಹಾಗು ಪರಾವಲಂಬೀ ಜೀವನ

೮. ಕುಂಭದಲ್ಲಿ ಶುಕ್ರನಿದ್ದರೆ ಅಭ್ಯುದಯಕಾರಕನು. ಆದರೆ, ತುಲಾನವಾಂಶವಲ್ಲದೆ, ಅನ್ಯನವಾಂಶಸ್ಥಿತ ಚಂದ್ರನು ಕುಂಭದಲ್ಲಿದ್ದರೆ ಪತ್ನೀವಿಯೋಗ.

೧೩. ಸಕಲ ಲಗ್ನಗಳಿಗೆ

೧. ಪ್ರಥಮ, ಚತುರ್ಥ, ಸಪ್ತಮ ಅಥವಾ ದಶಮ ಭಾವಾಧಿಪತಿ ಗಳು ದಶಮ ಭಾವದಲ್ಲಿದ್ದರೆ ಸರಕಾರೀ ನೌಕರರಾಗಲು ಸಾಧ್ಯವಿದೆ.

೨. ಪ್ರಥಮ ಮತ್ತು ದ್ವಿತೀಯ ಭಾವಾಧಿಪರು ದ್ವಿತೀಯ ಭಾವ ದಲ್ಲಿದ್ದರೆ, ಸರಕಾರೀ ಉದ್ಯೋಗಸ್ಥ.

೩. ಸಪ್ತಮ ಮತ್ತು ದಶಮಾಧಿಪರು ಲಗ್ನದಲ್ಲಿದ್ದರೆ, ಸರಕಾರೀ ಉದ್ಯೋಗಸ್ಥ.

೪. ಚಂದ್ರನು ಲಗ್ನದಲ್ಲಿದ್ದು, ಶುಕ್ರನು ಷಷ್ಠದಲ್ಲಿದ್ದರೆ, ಅಥವಾ ಶುಕ್ರನು ಷಷ್ಠಾಧಿಪನಾಗಿ ತೃತೀಯ ಭಾವದಲ್ಲಿದ್ದರೆ, ಏಕಪುತ್ರಿ ಅಥವಾ ಏಕಪುತ್ರನು ಜನಿಸುವರು.

೫. ಚಂದ್ರನು ಸೂರ್ಯನ ಚತುರ್ಥ ಅಥವಾ ದಶಮ ಕೇಂದ್ರದಲ್ಲಿದ್ದರೆ ಪಿತನಿಗಿಂತ ಸ್ಥಾನಮಾನದಲ್ಲಿ ಸಣ್ಣವನು.

೬. ಚಂದ್ರನು ಲಗ್ನದಿಂದಲೂ ಸೂರ್ಯನಿಂದಲೂ ೨, ೫, ೮, ಅಥವಾ ೧೧ನೇ ಭಾವಗಳಲ್ಲಿದ್ದರೆ, ಪಿತನಿಗೆ ಸಮಾನವಾದ ಸ್ಥಾನಮಾನ ಗಳಿಸುವನು.

೭. ಚಂದ್ರನು ಲಗ್ನದಿಂದಲೂ ಸೂರ್ಯನಿಂದಲೂ ೩, ೬, ೯ ಅಥವಾ ೧೨ನೇ ಭಾವಗಳಲ್ಲಿದ್ದರೆ ಪಿತನಿಗಿಂತ ಅಧಿಕ ಕೀರ್ತಿವಂತ ಹಾಗೂ ಧನವಂತನಾಗುವನು.

೮. ಸಪ್ತಮಾಧಿಪನು ಶುಕ್ರನೊಡನೆ ಇದ್ದರೆ, ಪತ್ನಿಯು ಸಂತಾನ ರಹಿತಳಾಗುವಳು.

ಅನುಭೂತ ಯೋಗಗಳು

೧. ಪಿತನ ಷಷ್ಠ ಅಥವಾ ದ್ವಾದಶ ಭಾವರಾಶಿಗಳು, ಪುತ್ರನ ಲಗ್ನದಲ್ಲಿದ್ದರೆ, ಪಿತಾಪುತ್ರರೊಳಗೆ ಸದಾ ದ್ವೇಷ.

೨. ಪಿತನ ಲಗ್ನಾಧಿಪನು, ಅಥವಾ ಪಿತನ ಪಂಚಮಾಧಿಪನು ಮತ್ತು ಪುತ್ರನ ಲಗ್ನಾಧಿಪನು ಪರಸ್ಪರ ಶತ್ರುಗಳಾದರೆ ಪಿತಾಪುತ್ರರೊಳಗೆ ಸದಾ ದ್ವೇಷ.

೩. ರವಿ, ಕುಜ ಮತ್ತು ಶನಿಗಳು ಪುತ್ರನ ನವಮಭಾವದಲ್ಲಿದ್ದರೆ, ಪಿತಾಪುತ್ರರೊಳಗೆ ಸದಾ ದ್ವೇಷ.

೪. ತೃತೀಯ ಚತುರ್ಥಾಧಿಪತಿಗಳು ಚತುರ್ಥಭಾವದಲ್ಲಿದ್ದು, ದಶಮಾಧಿಪತಿಯ ದೃಷ್ಟಿಹೊಂದಿದರೆ, ಯೋಗ್ಯ ಹಾಗೂ ಭಾಗ್ಯಶಾಲಿ ಸಹೋದರರಿರುವರು.

೫. ಮಿಥುನ ಲಗ್ನ—ಚಂದ್ರನು ರಾಹು ಅಥವಾ ಕೇತುಯುತನಾಗಿ ಷಷ್ಠಭಾವದಲ್ಲಿ; ಶುಕ್ರನು ಚತುರ್ಥಭಾವದಲ್ಲಿ; ಸೂರ್ಯಬುಧರು ಪಂಚಮದಲ್ಲಿ; ಮತ್ತು ಗುರು ಕೇಂದ್ರದಲ್ಲಿ ಇದ್ದಾಗ, ವಿಶ್ವವಿಖ್ಯಾತ ಜ್ಯೋತಿಷ್ಕನು ಜನಿಸುವನು.

೬. ಷಷ್ಠಸಪ್ತಮಾಧಿಪತೊಡನೆ ಶುಕ್ರನಿದ್ದ ಜಾತಕದವನು ಯಾವ ಹುಡುಗಿಯನ್ನೂ ಮದುವೆಯಾಗಬಾರದು.

೭. ಪಂಚಮಾಧಿಪನು ಸೂರ್ಯಯುತನಾದರೆ, ಬಹುಪುತ್ರಯೋಗ.

೮. ಲಗ್ನ, ದ್ವಿತೀಯ, ಪಂಚಮ ಅಥವಾ ದಶಮದಲ್ಲಿ ಸೂರ್ಯಕುಜರಿದ್ದರೆ, ವೈದ್ಯ ಅಥವಾ ಡಾಕ್ಟರನಾಗಬಹುದು.

೯. ಸಪ್ತಮಾಧಿಪನು ಸಪ್ತಮವನ್ನು ನೋಡಿದರೆ, ಪತ್ನಿಯು ವಿವಾಹದನಂತರ ಶ್ವಾಸರೋಗದಿಂದ ಪೀಡಿತಳಾಗಬಹುದು.

೧೦. ರಾಹು ಅಥವಾ ಕೇತು ಷಷ್ಠಭಾವದಲ್ಲಿದ್ದರೆ ಕ್ಷಯವಾಗುವ ಸಂಭವವಿದೆ.

೧೧. ಶುಕ್ರನು ಷಷ್ಠಭಾವದಲ್ಲಿ ಬಲಿಷ್ಠನಾಗಿದ್ದರೆ ಮದ್ಯಪಾನ ಮಾಡುವವನು.

೧೨. ರವಿಸ್ಥಿತ ನಕ್ಷತ್ರ ಸಂಖ್ಯೆ (ಅಶ್ವಿನ್ಯಾದಿ)ಯನ್ನು ಮತ್ತು ರವಿಸ್ಥಿತ ನಕ್ಷತ್ರದಿಂದ ಚಂದ್ರಸ್ಥಿತ ನಕ್ಷತ್ರ ಸಂಖ್ಯೆಯನ್ನು ಕೂಡಿಸಿ ಬಂದುದು (೨೭ಕ್ಕಿಂತ ಹೆಚ್ಚಿದ್ದರೆ ಅದರಿಂದ ೨೭ ಕಳೆಯಬೇಕು.) ೪, ೧೦, ೧೩ ಅಥವಾ ೨೦ ಆದರೆ ಭಾಗ್ಯಶಾಲಿಯಾಗುವನು. (ಇದು ಮುಹೂರ್ತದಲ್ಲಿಯೂ ಇದ್ದರೆ, ಅತ್ಯಂತ ಶುಭಮುಹೂರ್ತ.)

೧೩. ಶುಕ್ರಸ್ಫುಟ ಮತ್ತು ಚತುರ್ಥಾಧಿಪತಿಯ ಸ್ಫುಟಗಳನ್ನು ಕೂಡಿಸಿ ಬಂದುದು ಕೇಂದ್ರ ಅಥವಾ ತ್ರಿಕೋಣವಾದರೆ, ಗುರು ಅಲ್ಲಿ ಗೋಚರದಲ್ಲಿ ಬಂದಾಗ ವಾಹನಯೋಗ.

೧೪. ಶುಕ್ರಸ್ಫುಟ ಮತ್ತು ಚತುರ್ಥಾಧಿಪನ ಸ್ಫುಟ-ಇವೆರಡನ್ನೂ ಕೂಡಿಸಿ ಬಂದುದರ ಸೂಚಕರಾಶಿಯಲ್ಲಿ ಗುರು ಗೋಚರದಲ್ಲಿ ಬಂದಾಗ ಉತ್ತಮಕಾಲ ಹಾಗೂ ಧನಲಾಭ.

೧೫. ಶುಕ್ರಸ್ಫುಟ ಮತ್ತು ನವಮಾಧಿಪ ಸ್ಫುಟ—ಇವೆರಡನ್ನು ಕೂಡಿಸಿ ಬಂದುದರ ಸೂಚಕರಾಶಿಯಲ್ಲಿ ಗುರು ಗೋಚರದಲ್ಲಿ ಚಲಿಸುವಾಗ, ಭಾಗ್ಯಕಾಲ ಹಾಗೂ ಧನಸಂಚಯ.

೧೬. ಲಗ್ನ ಸ್ಫುಟ, ದ್ವಿತೀಯಾಧಿಪತಿ ಸ್ಫುಟ, ಪಂಚಮಾಧಿಪತಿ ಸ್ಫುಟ ಮತ್ತು ಏಕಾದಶಾಧಿ ಸ್ಫುಟ—ಈ ನಾಲ್ಕನ್ನು ಕೂಡಿಸಿ, ಬಂದುದರ ಸೂಚಕರಾಶಿಯಲ್ಲಿ ಗುರು ಗೋಚರದಲ್ಲಿ ಬಂದಾಗ ಅತ್ಯಂತ ಉತ್ತಮ ಭಾಗ್ಯಕಾಲ ಹಾಗೂ ಧನಲಾಭ. (ಸೂಚಕರಾಶಿಯು ಕೇಂದ್ರ, ತ್ರಿಕೋಣ, ದ್ವಿತೀಯ ಅಥವಾ ಏಕಾದಶವಾದರೆ ಅತ್ಯಂತ ಪ್ರಬಲ ಭಾಗ್ಯ ಹಾಗೂ ನಿಶ್ಚಿತ ಧನಸಂಚಯ.)

೧೭. ಸಪ್ತಮ ಅಷ್ಟಮ ಭಾವಾಧಿಪರು ಅಷ್ಟಮಭಾವದಲ್ಲಿ ಯುತಿಯಲ್ಲಿದ್ದು ಪಾಪಗ್ರಹದೃಷ್ಟರಾದರೆ ವಿಧವಾಯೋಗ.

೧೮. ಸಪ್ತಮಾಧಿಪನು ಶನಿಯೊಡನೆ ಇದ್ದು, ಕುಜದೃಷ್ಟನಾದರೆ, ವೈಧವ್ಯ.

೧೯. ಚಂದ್ರರಾಹುಗಳು ಅಷ್ಟಮಭಾವದಲ್ಲಿದ್ದು ಪಾಪದೃಷ್ಟರಾದರೆ, ವೈಧವ್ಯ.

೨೦. ಶುಕ್ರರಾಹುಗಳು ಷಷ್ಠಭಾವದಲ್ಲಿದ್ದರೆ, ಕ್ಷಯರೋಗ.

೨೧. ಸಪ್ತಮಾಧಿಪನು ರಾಹು ಅಥವಾ ಕೇತುವಿನೊಡನೆ ಇದ್ದರೆ, ಹಾಗೂ ಲಗ್ನಾಧಿಪನು ಬಲಿಷ್ಠನಾದರೆ, ಅಂತರ್ಜಾತೀಯ ವಿವಾಹ.

೨೨. ಶನಿ ಅಥವಾ ರಾಹು ದ್ವಿತೀಯದಲ್ಲಿದ್ದು, ಸಪ್ತಮಾಧಿಪನು ನೀಚನಾಗಿ, ಲಗ್ನಾಧಿಪನು ಬಲಿಷ್ಠನಾದರೆ, ಅಂತರ್ಜಾತೀಯ ವಿವಾಹ.

೨೩ ರಾಹು, ಸೂರ್ಯಕುಜರು ಸ್ತ್ರೀಲಗ್ನದಲ್ಲಿದ್ದರೆ, ವಿಧವೆ; ಆ ಮೂರು ಗ್ರಹಗಳು ಶುಕ್ರನಿಂದ ದ್ವಿತೀಯದಲ್ಲಿ ಕೂಡ ಇದ್ದರೆ, ವಿಧವೆಯಾದ ಅವಳು ಪುನಃ ಮದುವೆಮಾಡಿಕೊಳ್ಳುವಳು.

೨೪. ಚಂದ್ರನು ದ್ವಾದಶದಲ್ಲಿದ್ದು ಸೂರ್ಯನು ಷಷ್ಠದಲ್ಲಿದ್ದರೆ, ಅಥವಾ ಸೂರ್ಯನು ದ್ವಾದಶದಲ್ಲಿದ್ದು ಚಂದ್ರನು ಷಷ್ಠದಲ್ಲಿದ್ದರೆ, ಪುರುಷನು ಅಥವಾ ಅವನ ಹೆಂಡತಿಯು ಏಕನಯನ ಅಥವಾ ಏಕನಯನೆ.

೨೫. ಶನಿಕುಜರು ಚಂದ್ರಶುಕ್ರರ ಸಪ್ತಮಭಾವದಲ್ಲಿದ್ದರೆ, ಪತ್ನೀ ಪುತ್ರರ ಭಾಗ್ಯವಿರದು.

೨೬. ಸಪ್ತಮದಲ್ಲಿ ಶುಕ್ರ ಅಥವಾ ಕುಜನಿದ್ದು ಪಾಪಗ್ರಹದೃಷ್ಟನಾದರೆ, ವಾತರೋಗ ಪೀಡಿತ ಪತ್ನಿಯು ಅವನದು.

೨೭. ಚಂದ್ರ ಜಲರಾಶಿಯಲ್ಲಿದ್ದು ಪಾಪದೃಷ್ಟನಾದರೆ, ಅಂಡವೃದ್ಧಿ (Hydrocele).

೨೮. ಚಂದ್ರನು ಕರ್ಕಾಟಕದಲ್ಲಿದ್ದು, ಪಾಪದೃಷ್ಟನಾದರೆ, ಉದರ ವಲ್ಮೀಕವಾಗುವುದು (Cancer of the stomach).

೨೯. ತುಲೆಯ ಚಂದ್ರನು ಪಾಪದೃಷ್ಟನಾದರೆ, ಮೂತ್ರಪಿಂಡ ರೋಗ (Brights disease or Nephritis).

೩೦ ತುಲೆಯ ಶನಿಯು ಪಾಪದೃಷ್ಟನಾದರೆ, ಮೂತ್ರಾಶ್ಮರೀ ಹಾಗೂ ಮೂತ್ರಕೃಚ್ಛ್ರ ರೋಗ.

೩೧. ಕರ್ಕಾಟಕದ ಗುರು ಪಾಪದೃಷ್ಟನಾದರೆ, ಉದರ ರೋಗ.

೩೨. ಕನ್ಯಾರಾಶಿಯ ಗುರು ಪಾಪದೃಷ್ಟನಾದರೆ, ಯಕೃತ್ ರೋಗ. ಅಥವಾ ಮಹಾಮಾರೀ ರೋಗ.

೩೩. ಕುಂಭದ ಕುಜನು ಪಾಪದೃಷ್ಟನಾ। ಲಗ್ನದಿಂದ ಷಷ್ಠಾಷ್ಟಮ ದ್ವಾದಶದಲ್ಲಿದ್ದರೆ, ಅಂಗಹೀನತೆಯು ಬಂದೊದಗುವುದು. (ಹೆಚ್ಚಾಗಿ ಕಾಲು ಕುಂಟನಾಗುವುದು.)

೩೪. ಕನ್ಯೆಯ ಶುಕ್ರನು ಪಾಪದೃಷ್ಟನಾದರೆ, ಕಾರ್ಯದಲ್ಲಿ ಚತುರನಲ್ಲ.

೩೫. ವೃಶ್ಚಿಕದ ಶುಕ್ರನು ಪಾಪದೃಷ್ಟನಾದರೆ, ಗುಹ್ಯ ಅಥವಾ ಮೇಹ ರೋಗದಿಂದ ಬಳಲುವನು. (Venereal disease).

೩೬. ಸಿಂಹದ ರವಿಯು ಪಾಪದೃಷ್ಟನಾದರೆ, ಹೃದ್ರೋಗ ಹಾಗೂ ಬೆನ್ನು ನೋವು.

೩೭. ಧನುವಿನ ರವಿಯು ಪಾಪದೃಷ್ಟನಾದರೆ, ಗೃಧ್ರಸೀ (Sciatica) ರೋಗ ಬಂದೊದಗುವುದು.

೩೮. ಮೀನದ ರವಿಯು ಪಾಪದೃಷ್ಟನಾದರೆ, ಪಾದದಾಹ ಹಾಗೂ ಪಾದಗಳಲ್ಲಿ ಬೆವರು ಬರುವುದು

೩೯. ಕುಜನು ಸಪ್ತಮದಲ್ಲಿ; ಸಪ್ತಮಾಧಿಪನು ಸಪ್ತಮದಲ್ಲಿದ್ದರೆ, ವಿವಾಹವು ದುಃಖಕಾರಕ ಮತ್ತು ದಾಂಪತ್ಯದಲ್ಲಿ ನಿರಂತರ ಕಲಹ.

೪೦. ಸಿಂಹ ಲಗ್ನ ಅಥವಾ ಕುಂಭ ಲಗ್ನ (ಚತುರ್ಥ ನವಮಾಧಿಪರು ಒಬ್ಬನೇ) ಅಥವಾ ಚತುರ್ಥ ನವಮಾಧಿಪರು ಯುತಿಯಲ್ಲಿ ಅಥವಾ

ಪರಸ್ಪರ ನೋಡಿದರೆ, ಹಾಗೂ ಈ ಎಲ್ಲ ಯೋಗಗಳಲ್ಲಿ ಲಗ್ನಾಧಿಪನು ಬಲಿಷ್ಠನಾಗಿಯೂ ಪಾಪದೃಷ್ಟಿ ಹೊಂದದೆಯೂ ಇದ್ದರೆ, ಪರದೇಶ ಪ್ರಯಾಣ ಹಾಗೂ ವಿದ್ಯಾಭ್ಯಾಸ ಮಾಡುವನು.

೪೧. ಏಕಾದಶದಲ್ಲಿ ಪಾಪಗ್ರಹನಿದ್ದರೆ ಲಂಚ ಮೊದಲಾದ ಅನ್ಯಾಯದ ಉಪಾಯಗಳಿಂದ ಧನಲಾಭ ಮತ್ತು ಸಂಚಯ.

೪೨. ಬುಧನು ಲಗ್ನದಲ್ಲಿ ಮತ್ತು ಚಂದ್ರನು ದ್ವಿತೀಯದಲ್ಲಿದ್ದರೆ, ಮೋಸಗಾರ ಹಾಗೂ ವಿಶ್ವಾಸಕ್ಕೆ ಅಯೋಗ್ಯ.

೪೩. ಶನಿ ಕುಜರು ಯುತಿಯಲ್ಲಿದ್ದರೆ, ಅಸತ್ಯವಾದಿ ಮತ್ತು ಕಪಟೀ.

೪೪. ಉಭಯ ರಾಶಿಗಳು ಕೇಂದ್ರದಲ್ಲಿದ್ದು ಹೆಚ್ಚಿನ ಪಾಪಗ್ರಹಗಳು ಕೇಂದ್ರಗತವಾದರೆ, ಮತ್ತು ಚಂದ್ರನು ಉಭಯ ರಾಶಿಯಲ್ಲಿದ್ದು ಬಲಿಷ್ಠನಾದರೆ, ಉನ್ಮಾದ ರೋಗಪೀಡಿತ.

೪೫. ಚಂದ್ರನು ಅಥವಾ ರವಿಯು ವೃಷಭರಾಶಿಯ ೭ ಅಥವಾ ೨೯ನೇ ಡಿಗ್ರಿಯಲ್ಲಿ, ಅಥವಾ ಕರ್ಕಾಟಕದ ೧೪ನೇ ಡಿಗ್ರಿಯಲ್ಲಿ, ಅಥವಾ ವೃಶ್ಚಿಕದ ೧೬ನೇ ಡಿಗ್ರಿಯಲ್ಲಿದ್ದರೆ, ಅಂಧತ್ವದಿಂದ ಬಳಲುವನು ಅಥವಾ ಗ್ಲಾಕೋಮಾ ರೋಗವು ಬಂದೊದಗುವುದು.

೪೬. ಜ್ಯೇಷ್ಠಾ ನಕ್ಷತ್ರದಲ್ಲಿ ಚಂದ್ರಕುಜರಿದ್ದರೆ, ಅಂಧ (ಕುರುಡ) ನಾಗುವನು.

೪೭. ಗುರು ಅಥವಾ ಶುಕ್ರನು ಸ್ವಕ್ಷೇತ್ರದಲ್ಲಿ ಅಥವಾ ಉಚ್ಚಕ್ಷೇತ್ರದಲ್ಲಿ ಅಥವಾ ಜಲರಾಶಿಯಲ್ಲಿ ಇದ್ದರೆ, ಎಡ್ರಿನಲ್ ಗ್ರಂಥಿರೋಗವು ಬರುವುದು.

Edited, Printed & Published by K. V. Shenoy
at The Prabhat Printers, Ltd., Mangalore.